ಕರ್ನಾಟಕ ಸರ್ಕಾರ

# ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ,

**ಕೇಂದ್ರೀಕೃತ ದಾಖಲಾತಿ ಘಟಕ, ಕಾವೇರಿ ಭವನದ ಎದುರು, ಕೆ.ಜಿ.ರಸ್ತೆ,**

**ಬೆಂಗಳೂರು-560 009**

ಸಂಖ್ಯೆ: ಸಿಎಸಿ/04/ಪ.ಪ್ರಾ.ಶಾ.ಶಿ.ನೇ/01/2017-18 ದಿನಾಂಕ: 25/04/2019

27

## ಕಛೇರಿ ಆದೇಶ

ವಿಷಯ: ಶಿಕ್ಷಕರ ಅರ್ಹತಾ ಪರೀಕ್ಷೆ-2018 ರ ಫಲಿತಾಂಶವನ್ನು ಪ್ರಕಟಿಸುವ ಬಗ್ಗೆ

ಉಲ್ಲೇಖ: ಸರ್ಕಾರದ ಆ.ಸಂ. ಇಡಿ.94ಪಿಬಿಎಸ್2018 ದಿನಾಂಕ:15.04.2019

********

ದಿನಾಂಕ 03/02/2019, ಭಾನುವಾರದಂದು KARTET 2018 ನಡೆದ ಪರೀಕ್ಷೆಯ ಕೀ ಉತ್ತರಗಳನ್ನು 19/02/2019 ರಂದು ವೆಬ್‌ಸೈಟ್‌ನಲ್ಲಿ ಪ್ರಕಟಿಸಿ, ಅಭ್ಯರ್ಥಿಗಳಿಂದ ಆಕ್ಷೇಪಣೆಗಳನ್ನು ಆಹ್ವಾನಿಸಲಾಗಿತ್ತು ಹಾಗೂ ಆಕ್ಷೇಪಣೆಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಲು 25/02/2019 ರವರೆಗೆ ಕಾಲಾವಕಾಶ ನೀಡಲಾಗಿತ್ತು. ಪರಿಷ್ಕೃತ ಕೀ ಉತ್ತರಗಳನ್ನು 27/03/2019 ರಂದು ಪ್ರಕಟಿಸಲಾಗಿದೆ. ಆದಾಗ್ಯೂ ಕೆಲವು ಕೀ ಉತ್ತರಗಳಿಗೆ ಅಭ್ಯರ್ಥಿಗಳು ಪದೇ ಪದೇ ಆಕ್ಷೇಪಣೆಗಳನ್ನು ಸಲ್ಲಿಸಿರುತ್ತಾರೆ. ಅಂತಹ ಆಕ್ಷೇಪಣೆಗಳನ್ನು ಪರಿಶೀಲಿಸಲು ಮಾನ್ಯ ಪ್ರಧಾನ ಕಾರ್ಯದರ್ಶಿಗಳು ( ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಕರ್ನಾಟಕ ಸರ್ಕಾರ) ರವರು ಆದೇಶ ನೀಡಿರುತ್ತಾರೆ.ಅದರಂತೆ ಆಕ್ಷೇಪಣೆಗಳನ್ನು ತಜ್ಞರ ಸಮಿತಿಯ ಮುಂದೆ ಮಂಡಿಸಿ ತಜ್ಞರ ಅಭಿಪ್ರಾಯದಂತೆ ಒಂದು ಪ್ರಶ್ನೆಗೆ ಸಂಬಂಧಿಸಿದ ಆಕ್ಷೇಪಣೆಗಳನ್ನು ಪರಿಗಣಿಸಿ ಪರಿಷ್ಕರಿಸಲಾಗಿದೆ.

1) ಪತ್ರಿಕೆ 2 ರ ಸಮಾಜ ವಿಜ್ಞಾನ ಪತ್ರಿಕೆಯಲ್ಲಿ **ಪ್ರಶ್ನೆ ಸಂಖ್ಯೆ 92 (ಸ್ವಾತಂತ್ರ್ಯಾ ನಂತರ ಭಾರತ ಸರ್ಕಾರಕ್ಕೆ ಹರಸಾಹಸದ ಕೆಲಸವಾದದ್ದು: ಆಯ್ಕೆಗಳು: 1) ನಿರಾಶ್ರಿತರ ಸಮಸ್ಯೆ, 2) ಮತೀಯ ಗಲಭೆಗಳು, 3) ಸರ್ಕಾರದ ರಚನೆ , 4) ದೇಶೀಯ ಸಂಸ್ಥಾನಗಳ ವಿಲೀನೀಕರಣ)** ಕ್ಕೆ ರಾಜ್ಯ ಪಠ್ಯಕ್ರಮದ 10 ನೇ ತರಗತಿಯ ಸಮಾಜ ವಿಜ್ಞಾನ ಪಠ್ಯಪುಸ್ತಕದ ಪುಟ 63 ನ್ನು ಆಧರಿಸಿ ಕೀ ಉತ್ತರವನ್ನು ಸಿದ್ದಪಡಿಸಲಾಗಿತ್ತು. ಅಭ್ಯರ್ಥಿಗಳು ನೀಡಿದ್ದ ದಾಖಲೆಗಳನ್ನು ಪರಿಶೀಲಿಸಿ ನಂತರ ತಜ್ಞರು ನೀಡಿರುವ ಅಭಿಪ್ರಾಯದಂತೆ ಉಳಿದ ಎಲ್ಲಾ ಆಯ್ಕೆಗಳು ಸಮಂಜಸವಾಗಿರುವುದರಿಂದ ಕೆಳಕಂಡಂತೆ ನಿರ್ಧರಿಸಲಾಗಿದೆ.

- ಮತೀಯ ಗಲಭೆಗಳು (ಸಿಎಸಿ ನಮೂದಿಸಿರುವ ಉತ್ತರ) ಎಂದು ಉತ್ತರಿಸಿರುವ ಅಭ್ಯರ್ಥಿಗಳಿಗೆ 1 ಅಂಕವನ್ನು ನೀಡುವುದು
- ಉಳಿದ ಮೂರು ಆಯ್ಕೆಗಳಲ್ಲಿ ಯಾವುದೇ ಒಂದನ್ನು ನಮೂದಿಸಿರುವ ಅಭ್ಯರ್ಥಿಗಳಿಗೆ ಈ ಪ್ರಶ್ನೆಯನ್ನು ಪರಿಗಣಿಸದೇ ಇರುವುದು.
- ಈ ಪ್ರಶ್ನೆಯನ್ನು ಉತ್ತರಿಸದೇ ಇರುವ ಅಭ್ಯರ್ಥಿಗಳ ಅಂಕಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

ಈ ಒಂದು ಪ್ರಶ್ನೆಯನ್ನು ಪರಿಷ್ಕರಿಸಿರುವುದರ ಹಿನ್ನೆಲೆಯಲ್ಲಿ KARTET-2018ರ ಅಂತಿಮ ಪರಿಷ್ಕೃತ ಫಲಿತಾಂಶವನ್ನು ಪ್ರಕಟಿಸಿದೆ. ಇನ್ನು ಮುಂದೆ KARTET 2018 ಗೆ ಸಂಬಂಧಿಸಿದಂತೆ ಯಾವುದೇ ಆಕ್ಷೇಪಣೆಗಳನ್ನು ಸ್ವೀಕರಿಸುವುದಿಲ್ಲ. ಪರಿಷ್ಕೃತ ಫಲಿತಾಂಶಕ್ಕೆ ಅನುಗುಣವಾಗಿ ಉತ್ತೀರ್ಣರಾಗುವ ಅಭ್ಯರ್ಥಿಗಳು GPSTR-2019 ರ ಪರೀಕ್ಷೆಗೆ ಆನ್‌ಲೈನ್ ಅರ್ಜಿ ಸಲ್ಲಿಸಲು ಅನೂಕೂಲಿಸಲು ಅರ್ಜಿ ಸ್ವೀಕರಿಸುವ ಅಂತಿಮ ದಿನಾಂಕವನ್ನು 30/04/2019 ರ ವರೆಗೆ ವಿಸ್ತರಿಸಿದೆ. **ಆದರೆ GPSTR-2019 ರ ಪರೀಕ್ಷಾ ದಿನಾಂಕಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.**

ಆಯುಕ್ತರು

ಸಾರ್ವಜನಿಕ ಶಿಕ್ಷಣ ಇಲಾಖೆ